

# ಶಾರುಖ್ 30 ನಾಟ್‌ಔಟ್

■ ವಿಶಾಖ ಎನ್.

ಕಣ್ಣುಗಳಲ್ಲಿ ಅಲುಗಾಡಿಸಲಾಗದ ಆತ್ಮವಿಶ್ವಾಸ. ಮಧ್ಯಂತರದ ಹೊತ್ತಿಗೆ ತೆರೆಮೇಲೆ ಕಾಣಿಸಿಕೊಳ್ಳುವ ಅವಕಾಶಕ್ಕೂ ಬೆನ್ನುಮಾಡಲಾಗದ ಸ್ಥಿತಿ. 'ಬಣ್ಣವಿಲ್ಲ, ಎತ್ತರವಿಲ್ಲ ನೀನೆಂಥ ನಟ' ಎಂದು ಆಡಿಷನ್ ಸಂದರ್ಭದಲ್ಲಿ ಒಳಗಾಗಿದ್ದ ಮೂದಲಿಕೆಯ ನುಡಿಗಳ ಸೂಜಿಮೊನೆ. ಕಿರುತೆರೆಯಲ್ಲಿ ಒಂದು ಇನಿಂಗ್ಸ್ ಹೊಡೆದವರನ್ನು ಹಿಂದಿ ಚಿತ್ರರಂಗ ಸದಾ ವಾರೆಗಣ್ಣಿನಿಂದ ನೋಡುತ್ತಿದ್ದರೂ ಜಗ್ಗದ ಮನೋಬಲ.

ಈ ಎಲ್ಲ ವಾಕ್ಯಗಳನ್ನು ಒಂದು ಸೂತ್ರದಲ್ಲಿ ಪೋಣಿಸಿಕೊಂಡು ಅದಕ್ಕೆ ಶಾರುಖ್ ಖಾನ್ ಅವರನ್ನು ತಳಕುಹಾಕಿ ನೋಡಿದರೆ ಅವರ ಇನಿಂಗ್ಸ್‌ಗಳ ಕರಾಮತ್ತು ಗೊತ್ತಾಗುತ್ತದೆ. ಶಾರುಖ್ ಖಾನ್ ಸಿನಿಮಾ ಪಯಣ ಶುರುವಾಗಿ ಜೂನ್ 25ಕ್ಕೆ 30 ವರ್ಷ ತುಂಬಿತು.

1992ರಲ್ಲಿ 'ದೀವಾನ' ಸಿನಿಮಾದಲ್ಲಿ ಶಾರುಖ್ ಮೊದಲಿಗೆ ಮೋಡಿ ಮಾಡಿದ್ದು. ಮಧ್ಯಂತರದ ಹೊತ್ತಿಗೆ ಬೈಕ್ ಮೇಲೆ ಜುಂಯನೆ ಒಬ್ಬ ಜವ್ವನಿಗ ಬರುವಂಥ ಕ್ಲೀಷೆಯ ದೃಶ್ಯ ಅದು. ಸಿನಿಮಾದ ನಾಯಕ ರಿಷಿ ಕಪೂರ್ ಚರ್ಮದ ಸುಕ್ಕುಗಳನ್ನು ಅದಾಗಲೇ ಮೇಕಪ್ ಮುಚ್ಚಿಹಾಕಲು ಹೆಣಗುತ್ತಿದ್ದ ಸಂದರ್ಭ. ಅವರಿಗೆ ನಾಯಕಿಯಾಗಿ ಇದ್ದವರು ತುಂಬಾ ಚಿಕ್ಕಪ್ರಾಯದ ದಿವ್ಯಾ ಭಾರತಿ. ಶಾರುಖ್ ಖಾನ್ ಅಂತಹ ಕ್ಲೀಷೆಯ ದೃಶ್ಯದಲ್ಲೂ ತಮ್ಮ ಆಳವಾದ ಕೆನ್ನೆಗುಳಿಯನ್ನು ಕಾಣಿಸಿದರು. ಕಣ್ಣವರೆಗೆ ಇಳಿಬಿಟ್ಟಂತೆ ಜುಂಪೆ ಕೂದಲು, ಆ ಕಣ್ಣಲ್ಲಿ ಮಡುಗಟ್ಟಿದ್ದ ವಿಶ್ವಾಸ ಪ್ರೇಕ್ಷಕರು ತಂತಾವೇ ಶಿಳ್ಳೆ ಹೊಡೆಯುವಂತೆ ಮಾಡಿದ್ದನ್ನು ಮರೆಯಲಾಗದು.

'ಫೌಜಿ' ಟಿ.ವಿ. ಧಾರಾವಾಹಿಗಳ ಕಂತುಗಳನ್ನು ಈಗ ನೋಡಿದರೂ ಶಾರುಖ್ ಚರ್ಮದ ಬಣ್ಣ ಎಷ್ಟು ಕಪ್ಪಗಿತ್ತು ಎನ್ನುವುದು ಅರಿವಿಗೆ ಬರುತ್ತದೆ. ಈಗ ದೇಹದ ಬಣ್ಣ ಬದಲಾಗಿದೆ. ಅವರ ವೃತ್ತಿಬದುಕಿನಲ್ಲಿ ಹರಿದ ನೀರೂ ಹಲವು ಕಥೆಗಳನ್ನು ಅರುಹುತ್ತಿದೆ.

'ಅಹ್ಮಕ್' ಅಥವಾ 'ಎಹ್ಮಕ್' (ಅರೇಬಿಕ್ ಉಚ್ಚಾರದಲ್ಲಿ ಹೀಗೆನ್ನುತ್ತಾರೆ) ಎಂದರೆ ಮೂರ್ಖ ಶಿಖಾಮಣಿ ಎಂದರ್ಥ. ಆ ಶೀರ್ಷಿಕೆಯ ಧಾರಾವಾಹಿಯೊಂದರ (ದಾಸ್ತೊವ್‌ಸ್ಕಿಯ 'ಈಡಿಯಟ್' ಆಧರಿಸಿದ್ದು) ಕೆಲವು ಕಂತುಗಳಲ್ಲಿ ಶಾರುಖ್ ಅಭಿನಯಿಸಿದ್ದರು. ಅದು ಕಿರುತೆರೆಯಲ್ಲಿ ಪ್ರಸಾರವಾಗಲೇ ಇಲ್ಲ. ಆ ಹಂತದಲ್ಲಿ ಭಗವಾನ್ ಚಿತ್ರಮಂದಿರ್ ನಿರ್ಮಾಣ ಸಂಸ್ಥೆಯ 'ದೀವಾನಾ' ಹಿಂದಿ ಚಿತ್ರ ಶಾರುಖ್ ಹಣೆಬರಹವನ್ನು ಬದಲಿಸಿತು.

'ರಾಜು ಬನ್‌ಗಯಾ ಜಂಟಲ್‌ಮನ್' ಎಂಬ ಇನ್ನೊಂದು ಚಿತ್ರದಲ್ಲಿ ಜೂಹಿ ಚಾವ್ಲಾ ಹೆಚ್ಚು ತೆರೆಯನ್ನು ಆವರಿಸಿಕೊಂಡರೂ ಅಲ್ಲಿಯೂ ಈ ಯುವಕ ಜನಮನ ಗೆದ್ದರು. 1993ರಲ್ಲಿ ಬಿಡುಗಡೆಯಾದ 'ಬಾಜಿಗರ್' ಚಿತ್ರವು ಅಬ್ಬಾಸ್–ಮಸ್ತಾನ್ ನಿರ್ದೇಶಕ ಜೋಡಿ ಈ ಪ್ರತಿಭೆಯನ್ನು ಹೇಗೆ ದುಡಿಸಿಕೊಂಡಿತೆನ್ನುವುದಕ್ಕೆ ಉದಾಹರಣೆ. ನಾಯಕ, ಖಳನಾಯಕ ಎರಡೂ ಶಾರುಖ್. ನಾಯಕನಂತೆ ನಟಿಸಿದರೂ, ಅಸಲಿಯತ್ತಿನಲ್ಲಿ ಖಳನಾಗುವ ಸೇಡಿನ ಕಥಾನಕವನ್ನು ಆ ಸಿನಿಮಾ ಒಳಗೊಂಡಿತ್ತು. ಅನು ಮಲಿಕ್ ಸಂಗೀತ, ಕೃಷ್ಣ ಸುಂದರಿ ಕಾಜೋಲ್, ಶಾರುಖ್ ಮುಖಕ್ಕೆ ರಕ್ತ ಮೆತ್ತಿದಾಗ ಹೊಮ್ಮಿದ ಅತಿನಟನೆ – ಎಲ್ಲವನ್ನೂ ಜನ ಒಪ್ಪಿಕೊಂಡರು. ಶಾರುಖ್ ಅವರ ಅತಿನಟನೆಯೇ ಹೊಸ ರುಜುವಿನಂತೆ ಕಂಡಿತು. 'ಡರ್', 'ಅಂಜಾಮ್'ನಲ್ಲೂ ಅದೇ ವರಸೆ ಮುಂದುವರಿದದ್ದು. 'ಕರಣ್ ಅರ್ಜುನ್'ನಲ್ಲಿ ಶಾರುಖ್ ಹಾಗೂ ಸಲ್ಮಾನ್ ಇಬ್ಬರೂ ನಟಿಸಿದ್ದು, ಖಾನ್‌ದ್ವಯರ ದೊಡ್ಡ ಅಧ್ಯಾಯವೊಂದರ ಮುನ್ನುಡಿಯೇ ಹೌದು. ಕೇತನ್ ಮೆಹ್ತಾ ಅವರಂತಹ ನಿರ್ದೇಶಕರ ಅವಕಾಶಕ್ಕೂ ಒಡ್ಡಿಕೊಂಡ ಶಾರುಖ್, ಏಕತಾನತೆಯನ್ನು ಮೀರಬೇಕೆಂದು ಪದೇಪದೇ ಯತ್ನಿಸಿದ್ದರು. ಕನ್ನಡದ 'ಚಿಗುರಿದ ಕನಸು' ಆತ್ಮದ್ದೇ 'ಸ್ವದೇಸ್' ತರಹದ ಚಿತ್ರಕ್ಕೆ ಎದೆಗೊಟ್ಟಿದ್ದು ಅದಕ್ಕೆ ಸಾಕ್ಷಿ.

ಯಶ್‌ರಾಜ್ ಬ್ಯಾನರ್ ಶಾರುಖ್ ಖಾನ್ ಹಣೆಬರಹವನ್ನು ತಿದ್ದಿದ್ದು ಉಲ್ಲೇಖನೀಯ. 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೇಂಗೆ' ಹಿಂದಿ ಚಿತ್ರವು ಪಂಜಾಬಿ ಸಂಸ್ಕೃತಿಯನ್ನು, ವಿರಹ ವೇದನೆಯನ್ನು, ನಿಶ್ಚಿತಾರ್ಥವಾದ ಹುಡುಗಿಯೊಟ್ಟಿಗಿನ ಪ್ರೇಮದ ಸಿಕ್ಕುಗಳನ್ನು, ತ್ಯಾಗ ಮಾಡಿಯೇಬಿಟ್ಟ ಅನ್ನುವಾಗ ಮತ್ತೆ ಜೀವಗಳನ್ನು ಒಂದಾಗಿಸುವ ಯಶ್ ಚೋಪ್ರಾ ಶೈಲಿಯ ಮೆಲೋಡ್ರಾಮಾವನ್ನು ತುಳುಕಿಸಿತು.

'ರಾಮ್ ಜಾನೆ', 'ಯೆಸ್ ಬಾಸ್' ತರಹದ ವಿಪರೀತ ಅಭಿನಯದ ಚಿತ್ರಗಳಲ್ಲಿ ಶಾರುಖ್ ಕಾಣಿಸಿಕೊಂಡರು. 'ಇಂಗ್ಲಿಷ್ ಬಾಬು ದೇಸಿ ಮೇಮ್'ನಲ್ಲೂ ಗುಳಿಕೆನ್ನೆ ತೋರಿದರು. ಅವು ನೀರಸ ಎಂದು ಅಭಿಮಾನಿಗಳೇ ಠಸ್ಸೆ ಒತ್ತಿಬಿಟ್ಟರು. ಹೊಸ ತಲೆಮಾರಿನ ಹುರಿಯಾಳುಗಳ ನಡುವೆ ಶಾರುಖ್ ಕಥೆ ಮುಗಿಯಿತು ಎಂದು ವ್ಯಂಗ್ಯ ಹೊಸೆದವರಿಗೆ ಉತ್ತರರೂಪದಲ್ಲಿ ಅವರು ಸಿಕ್ಸ್‌ಪ್ಯಾಕ್ ಮಾಡಿಕೊಂಡು ಬಂದರು. ತಮಗಿಂತ ನೀಳಕಾಯದ ದೀಪಿಕಾ ಪಡುಕೋಣೆಯನ್ನು ನಾಯಕಿಯಾಗಿ ಪರಿಚಯಿಸಿ, 'ಓಂ ಶಾಂತಿ ಓಂ' ಎಂದರು. ಅದಕ್ಕೂ ಮೊದಲು 'ವೀರ್ ಝರಾ', 'ಚಕ್ ದೇ ಇಂಡಿಯಾ'ದಂಥ ಪ್ರಯೋಗಗಳಲ್ಲಿ ಅವರ ಕಣ್ಣಪಸೆಯ ತೀವ್ರತೆಯನ್ನು ನಾವೆಲ್ಲ ಕಂಡಿದ್ದೆವು.

ಮಗನಿಗೆ ಇಷ್ಟ ಎಂದು 'ರಾ. ಒನ್' ಮಾಡಿ ಕೈಸುಟ್ಟುಕೊಂಡರು. ಬಾಲಿಶ ಎಂದು ಗೊತ್ತಿದ್ದೂ 'ಹ್ಯಾಪಿ ನ್ಯೂ ಇಯರ್'ಗೆ ಕೈಹಚ್ಚಿದರು. ಈಗ 'ಜವಾನ್' ಸಿನಿಮಾ ನಿರ್ದೇಶನದ ಹೊಣೆಯನ್ನು ತಮಿಳಿನ ಅಟ್ಲಿ ಕೈಗಿತ್ತು, ಅದಕ್ಕೆ ವಿಜಯ್ ಸೇತುಪತಿಯನ್ನು ಖಳನಾಯಕನನ್ನಾಗಿ ಕರೆದುಕೊಂಡು ಬಂದಿದ್ದಾರೆ.

ಶಾರುಖ್ ತೆರೆದ ಕೈಗಳ ನಡುವೆ ಇರುವ ಪುಟ್ಟ ಹೃದಯದ ಮಿಡಿತಕ್ಕೆ ಕರಗುವ ಹೆಣ್ಮಣಿಗಳು ಈಗಲೂ ಇದ್ದಾರೆ. 'ಜಾನಮ್ ದೇಖ್ ಲೊ ಮಿಟ್ ಗಯೀ ದೂರಿಯಾ...' ಎಂಬ ಅವರ ಗೀತಾಹ್ವಾನ, ಅಂತಹ ಹೆಣ್ಣುಮಕ್ಕಳೆಲ್ಲರಿಗೂ ತಮ್ಮನ್ನೇ ಕರೆದಂತೆ ಭಾಸವಾದರೂ ಅಚ್ಚರಿಯಿಲ್ಲ.

ಮಗನ ಮಾದಕವಸ್ತು ವ್ಯಸನದ ಕಂತಿನ ನಡುವೆಯೂ ಅವರ ಕಂತದ ಸಿನಿಮಾ ಪ್ರೀತಿಗೆ ಶರಣೆನ್ನಬೇಕು. ಶಾರುಖ್ ಅಧ್ಯಾಯಗಳು ಇನ್ನೂ ಬಾಕಿ ಇವೆ. ■